ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ವರೆಗೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ವರೆಗೆ, ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " ಮೊದಲನೆಯದ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್: ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ವಿಶ್ವನಾಥರವರೇ, ನಿಮ್ಮ ಸೌಹಾರ್ದ ಬಿಲ್‌ನ್ನು ಮಂಡಿಸಿ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೇ, ಇಲ್ಲಿ ಚರ್ಚೆ ನಡೆದಿರುವುದು ಇದು ಬೇಡ ನಾವು ಪರಸ್ಪರ ಕೂತು ವಿಧಾನಪರಿಷತ್ತಿನಲ್ಲಾದಂತೆ ಚರ್ಚೆ ಮಾಡಿದರೆ ಒಳ್ಳೆಯದು. ನಾನು ಮೂಲಭೂತವಾಗಿ ಯಾಕೆ ಹೇಳುತ್ತೇನೆ ಅಂದರೆ ಸಹಕಾರ ತತ್ವ. ಅನ್ನುವುದು ಕೇವಲ ಈ ರೀತಿ

ತರಾತುರಿಯಲ್ಲಿ ಕೆಲವು ತಿದ್ದುಪಡಿ ಮಾಡಿ ಕಾನೂನು ಮಾಡಿ ಮುಗಿಯುವುದಲ್ಲ. ಅದಷ್ಟೋ ಶತಮಾನದಿಂದ ಸಹಕಾರ ರಂಗದಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿದೆ. ಇಂತಹ ಒಂದು ಸೌಹಾರ್ದ ಕಾನೂನನ್ನು ಬಹಳ ಯೋಚನೆ ಮಾಡಿ ಯೋಜನಾ ಆಯೋಗದಂತಹವರು ಚಿಂತನೆ ಮಾಡಿ ಇಡೀ ದೇಶದಲ್ಲಿ ಈ ಕಾನೂನು ಇರಬೇಕು ಅಂತ ಹೇಳಿ ಇದಕ್ಕೂ ಸಾಕಷ್ಟು ತಜ್ಞರ ಸಮಿತಿಗಳೆಲ್ಲಾ ಆಗಿ ನಾವು ಸೌಹಾರ್ದ ತಂದು 4 ವರ್ಷವಾಗಿದೆ. 4 ವರ್ಷದಲ್ಲಿ ಏನು ಲೋಪವಾಗಿದೆ ಅಂತ ಸರ್ಕಾರಕ್ಕೆ ಯಾವುದೇ ರೀತಿ ವರದಿ ಇಲ್ಲ. ಇದರ ಅನುಭವ ಏನು ಎಂದು ನಾವು ಪೂರ್ಣ ಮಾಹಿತಿ ಪಡೆಯದೆ ಈ ರೀತಿ ತರಾತುರಿಯಲ್ಲಿ ಸೌಹಾರ್ದ ಕಾನೂನಿಗೆ ತಿದ್ದುಪಡಿ ತಂದಿರುವುದಿದೆಯಲ್ಲ, ಅಧ್ಯಕ್ಷರೇ, ತಮ್ಮಲ್ಲೂ ವಿನಂತಿಸಿಕೊಳ್ಳುತ್ತಿದ್ದೇವೆ ತರಾತುರಿಯಲ್ಲಿ ಇದನ್ನು ಚರ್ಚೆ ಮಾಡುವುದು ಬೇಡ.

ಅಧ್ಯಕ್ಷರು: ಆಗಲೇ ಏನಾಯ್ತು ಅಂದರೆ ಹಿರಿಯ ಸದಸ್ಯರಾದ ಶ್ರೀ ಎಸ್.ಎಸ್. ಪಾಟೀಲರು ಇಲ್ಲ, ಎಲ್ಲಾದರೂ ಇದ್ದರೆ ಹುಡುಕಿಸಿ, we will meet after one hour.

ಶ್ರೀ ಜಗದೀಶ ಶೆಟ್ಟರ್: ಇದು ಕೊನೇ ಬಿಲ್ಲಿದೆ, ಎರಡು ಗಂಟೆಯೊಳಗೆ ಮುಗಿಸಿಬಿಡಿ. ಯಾಕೆಂದರೆ ಮೂರು ಗಂಟೆಯಿಂದ ನಾವು ಬೇರೆ ಬೇರೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಅಧ್ಯಕ್ಷರು: ಇವರು ಈಗ ಬೇಡ ಅನ್ನುತ್ತಿದ್ದಾರೆ.

ಶ್ರೀ ಜಗದೀಶ ಶೆಟ್ಟರ್: ಈ ಸದನದಲ್ಲಿ ಈಗ ಚರ್ಚೆಗೆ ಬೇಡ ಅನ್ನುತ್ತಿದ್ದಾರೆ. ಇವತ್ತು ಬಿಲ್ ಪಾಸ್ ಮಾಡದಿದ್ದರೆ ಏನೂ ತೊಂದರೆಯಾಗುವುದಿಲ್ಲ, ತಕ್ಷಣವೇ ಏನೂ ಅನಾಹುತವಾಗುವುದಿಲ್ಲ. ಇವತ್ತೇ ಈ ಸದನದಲ್ಲೇ ಪಾಸು ಮಾಡಬೇಕು ಎಂಬುದೇನೂ ಇಲ್ಲ.

ಅಧ್ಯಕ್ಷರು: ಸರ್ಕಾರದವರು ಹೇಳಬೇಕಲ್ಲಾ ಅದಕ್ಕೆ.

Sri Jagadish Shettar: Definitely.

ಶ್ರೀ ಶಿವಾನಂದ ಎಸ್ ಪಾಟೀಲ್: ಅಧ್ಯಕ್ಷರೇ, ಸೌಹಾರ್ದ ಆಕ್ಟಿನಡಿ ರಿಜಿಸ್ಟ್ರೇಷನ್ ಆಗಿರುವುವು ಎಷ್ಟು? ಬೇಸಿಕ್ಕಾಗಿ ನಿಮಗೂ ಗೊತ್ತಿದೆ. ಎಲ್ಲಾದರೂ litigation dispute form ಆಗಿದೆಯಾ? ಅದನ್ನಾದರೂ ಹೇಳಿ, ಏನೂ ಇಲ್ಲದೆ ಇಷ್ಟು ಆತುರತೆಯಿಂದ ಅದೂ ಇವತ್ತು ಕಡೇ ದಿವಸ,

ಶ್ರೀ ಎಚ್. ವಿಶ್ವನಾಥ್: ಇಲ್ಲಿ ಸೌಹಾರ್ದ ಕಾನೂನಿಗೆ ತಿದ್ದುಪಡಿ ತಂದಿರುವಂತಹದ್ದು ಈ ಕಾನೂನನ್ನು ರಾಷ್ಟ್ರಾಧ್ಯಕ್ಷರು ಅಂಕಿತ ಹಾಕುವ ಮುನ್ನ ಕೆಲವು ಷರತ್ತು ಒಡ್ಡಿದ್ದರು, ಅದರ ಆಧಾರದ ಮೇಲೆ Reserve Bank of India ಮತ್ತು India ಸರ್ಕಾರ ಕುಳಿತು ಸಲಹೆಗಳನ್ನು ಮಾಡಿರುವ ಆಧಾರದ ಮೇಲೆ ಇಲ್ಲಿ ತಿದ್ದುಪಡಿ ತಂದಿದೆಯೇ ಹೊರತು ಸೊಮೋಟೊ ತಂದಿರುವಂತಹದಲ್ಲ, ತರಾತುರಿ ಅಲ್ಲ, ಅಗತ್ಯವಾಗಿ ಆಗಬೇಕಾಗಿರುವ ತಿದ್ದುಪಡಿಯನ್ನು ದಯಮಾಡಿ ಈ ಸಭೆ ಪಾಸು ಮಾಡಿಕೊಡಬೇಕು ಅಂತ ನಾನು ವಿನಂತಿ ಮಾಡುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್: ರಿಸರ್ವ ಬ್ಯಾಂಕಿನ objections fulfill ಮಾಡುವುದಕ್ಕೆ ನಮ್ಮ ಡಿಸ್‌ಫ್ಯೂಟ್ ಇಲ್ಲ, but there are some other things, also, 10,12 ತಿದ್ದುಪಡಿ ತರುತ್ತಾ ಇದ್ದೀರಿ ಏಕಕಾಲಕ್ಕೆ ಲೈಸೆನ್ಸ್‌ಗಾಗಿ ಸಮಸ್ಯೆಯೇನಾಗಿದೆ ಅದರ ಬಗ್ಗೆ ನೀವು ತಂದಿದ್ದರೆ we do admit it. ಆದರೆ ನೀವು ಯಾರೋ additional Registrar ರನ್ನು ಸೇರಿಸುವುದು ಮತ್ತೆ

ನಿಮ್ಮ ಕ್ಲಚ್‌ಸ್‌ನಲ್ಲಿಟ್ಟುಕೊಳ್ಳುವುದು ಇದನ್ನೆಲ್ಲಾ ಹಾಕಿಕೊಂಡು ಕೂತರೆ ಹೇಗೆ? ದಯಮಾಡಿ, ನೀವು ಸುಮ್ಮನೆ ಯಾಕೆ ಆತುರತೆ ತೋರುವಿರಿ?

ಶ್ರೀ ಎಚ್. ವಿಶ್ವನಾಥ್: ನಿಜ ನೀವು ಹೇಳುವ ಆತಂಕಗಳು ಇಲ್ಲಿ ಇತ್ತು ಅವುಗಳ ನಿವಾರಣೆಯನ್ನು ನಾವು ಮೇಲ್ಮನೆಯಲ್ಲಿ ಮಾಡಿಕೊಂಡಿದ್ದೇವೆ, ಏತಕ್ಕೆಂದರೆ ಹಿರಿಯ ಸಹಕಾರಿಗಳಾದ ಮಾನ್ಯ ನಾಣಯಯ್ಯನವರು, ತಂಗಾ ರವರು, ವಿಎಸ್ ಅಚಾರ್ಯರು ನಾವೆಲ್ಲಾ ಸಭಾಪತಿಗಳ ಅಪ್ಪಣೆ ಪಡೆದು ಒಂದು ಗಂಟೆ ಹೊರಗಡೆ ಕೂತು ಚರ್ಚೆ ಮಾಡಿ ಸರ್ಕಾರ ಕೆಲವರು ವಿಷಯಗಳಲ್ಲಿ ಕನ್‌ಸೀಡಾಗಿ ಕೊನೆಯದಾಗಿ ಮಾರ್ಪಾಡಿನೊಂದಿಗೆ ನಾವು ಅಲ್ಲಿ ಪಾಸು ಮಾಡಿಕೊಂಡು ಇಲ್ಲಿಗೆ ಬಂದಿರುವುದು, ತಾವು ಏನೇನು ಆತಂಕ ಹೇಳುತ್ತಿದ್ದೀರಿ. ಅವೆಲ್ಲಾ ಪರಿಹಾರವಾಗಿವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸ್ಪಷ್ಟವಾಗಿ ನನ್ನ ಅಭಿಪ್ರಾಯ ಅಂದರೆ ಇದು ತರಾತುರಿಯಲ್ಲಿ ತರುವುದು ಬೇಡ.

ಶ್ರೀ ಎಚ್. ವಿಶ್ವನಾಥ್: ಯಾವ ತರಾತುರಿ? ಅರ್ಥವಾಗುವುದಿಲ್ಲ ನಾನು ಕೇಳುತ್ತೇನೆ. ದಯಮಾಡಿ ನಾವು ಸರ್ಕಾರ ಒದಗಿಸಿರುವುದನ್ನು ಓದಿ. ಇದು ಕರಾಳ ಶಾಸನ ಅಂತ ಏನೇನೋ ಪ್ರಿಂಟ್ ಮಾಡಿಕೊಂಡು ಕೊಟ್ಟಿದ್ದಾರಲ್ಲಾ ಅದನ್ನು ಓದಿ ವಾದ ಮಾಡಬೇಡಿ ದಯವಿಟ್ಟು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೇ, ಸಚಿವರು ತಪ್ಪಾಗಿ ಯಾವ್ಯಾವುದೋ ಅಭಿಪ್ರಾಯ ರೂಪಿಸಿಕೊಳ್ಳುವುದು ಬೇಡ ನನಗೂ ಇಲ್ಲ. ನನಗೆ ಒಂದೇ ಒಂದು ಅಂದರೆ ಇದರಲ್ಲಿ ನಾವು ಉಳಿದೆಲ್ಲಾ ಅಂಶಗಳನ್ನೂ ಗಮನಿಸಿದ್ದೇವೆ.

ಶ್ರೀ ಹೆಚ್. ವಿಶ್ವನಾಥ್: ಹೇಳಿ ಅದೇನು ತಿದ್ದುಪಡಿ ಆಗಬೇಕೆಂದು ಚರ್ಚೆ ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಚರ್ಚೆ ಪ್ರಾರಂಭಿಸಿದರೆ ಅದನ್ನು ಮುಂದುವರೆಸಬಹುದು, ಸಚಿವರಲ್ಲಿ ನನ್ನದೊಂದು ವಿನಂತಿ ಅಂದರೆ ತಾವು ಹೇಗೆ ವಿಧಾನ ಪರಿಷತ್ತಿನಲ್ಲಿ ಉಳಿದ ಸದಸ್ಯರ ಜೊತೆ ಕೂತು ಚರ್ಚೆ ಮಾಡಿ ಮಾಡಿದ್ದೀರೋ ಈ ಸದನದ ಸದಸ್ಯರ ಜೊತೆಗೂ ಚರ್ಚೆ ಮಾಡಿ ಬೇಕಾದರೆ, ನನ್ನ ಹತ್ತಿರವೂ ಯಾವ್ಯಾವುದು ತಿದ್ದುಪಡಿ ಆಗಬೇಕು ಅಂತ ಇವೆ. ತಮ್ಮ ಬಳಿಯೂ ವಿನಂತಿಸಿಕೊಂಡಿದ್ದೇನೆ. ಮೊದಲನೆಯದು ಈಗ ಇದನ್ನು ಚರ್ಚೆಗೆತ್ತಿಕೊಳ್ಳಬೇಕೋ ಬೇಡವೋ ಎಂಬುದು, ಮುಂದಿನ ದಿನಗಳಲ್ಲಿ ಇದನ್ನು ಚರ್ಚೆಗೊಳಪಡಿಸಬಹುದು, ಇವತ್ತೇ ಅರ್ಜೆಂಟಾಗಿ ಏನು? ಇವತ್ತೇ ಅಂಗೀಕರಿಸಬೇಕು ಅನ್ನುವಂಥಾದ್ದೇನಿಲ್ಲ.

ಶ್ರೀ ಎಚ್. ವಿಶ್ವನಾಥ್: ಯಾಕೆಂದರೆ ಇಲ್ಲಿ ಕೆಲವೊಂದಕ್ಕೆ ರಿಸರ್ವ್ ಬ್ಯಾಂಕಿನ ಇನ್‌ಶೂರೆನ್ಸ್ ಗ್ಯಾರಂಟಿ ಸ್ಕೀಮಿಗೆಲ್ಲಾ ಅಪ್ರೂವಲ್ ಈಗ ಆಗಬೇಕು. ಹಲವಾರು ಸೂಚನೆಗಳನ್ನು RBI ನಮಗೆ ಕೊಟ್ಟಿದೆ. ಅದೆಲ್ಲಾ ಇಲ್ಲಿ ತಿದ್ದುಪಡಿಯಲ್ಲಿ ತೆಗೆದುಕೊಂಡು ಬಂದಿದ್ದೇವೆ. ಈಗಾಗಲೇ ಎಂಟು ನೂರು ಕೋಟಿ ರೂಪಾಯಿಗಳ ಡಿಪಾಸಿಟ್ ಕಲೆಕ್ಷನ್ ಆಗಿದೆ. ಅದಕ್ಕೆ ಇನ್‌ಷೂರೆನ್ಸ್ ಗ್ಯಾರಂಟಿಯನ್ನು ಈ ತಿದ್ದುಪಡಿಯ ಮೂಲಕ ರಿಸರ್ವ್ ಬ್ಯಾಂಕ್‌ನವರು ಒಪ್ಪಿಕೊಳ್ಳಬೇಕಾಗಿದೆ. ಇದು urgency ಇಲ್ಲ ಎಂದರೆ ಹೇಗೆ ಹೇಳಿ. ಏಕೆಂದರೆ because even President of India apprehension ತೋರಿಸಿದರೂ ಕೂಡ ಈ involvement of the public deposits ಅದು ಇಲ್ಲಿ ಬಹಳ ಮುಖ್ಯ ಏಕೆಂದರೆ ನಮ್ಮ ಎದುರಿಗೆ ಆಗಲೇ ಇದ್ದಾವೆ, ಸುಮಾರು ಮುಳುಗಿರುವಂಥವು. ಏನಾಯಿತು

ಕೆಸಿಸಿ ಬ್ಯಾಂಕ್? ಮಾನ್ಯ ಎಸ್‌ಎಸ್ ಪಾಟೀಲರು ಎಲ್ಲಿಗೆ ಹೋದರೋ ಗೊತ್ತಿಲ್ಲ. ಕೆಸಿಸಿ ಬ್ಯಾಂಕ್ ಏನಾಯಿತು? ಗುಲ್ಬರ್ಗ ಬ್ಯಾಂಕ್ ಏನಾಯಿತು? ಗುಲ್ಬರ್ಗ ಅರ್ಬನ್ ಬ್ಯಾಂಕ್ ಏನಾಯಿತು? 70 ವರ್ಷಗಳ ಹಳೆಯದು. ಆದ್ದರಿಂದ ನೀವು ಯಾವುದೇ ಅಂಕುಶ ಇಲ್ಲದೇ democratic style and set up of administration ನಲ್ಲಿ President of India ಕೂಡ ಇವತ್ತಿನ ದಿವಸ check and balance power ಎನ್ನುವುದು ಇರಲೇಬೇಕೆನ್ನುವುದನ್ನು ಯಾವ ಅಧಿಕಾರವೂ ಯಾರಿಗೂ ಬೇಡ, ಎಲ್ಲಾ ಅಧಿಕಾರವನ್ನು ನಾನೇ ಇಟ್ಟುಕೊಂಡು ಸರ್ವಾಧಿಕಾರ ಮಾಡುತ್ತೇನೆ. ಅಂದರೆ ಆಗುತ್ತದೆಯೇ: ಸ್ವಾಮಿ, ಇದ್ದಾವುದೂ family ದು ಅಲ್ಲ. It involves crores crores depositors money, public money. ಯಾರು responsible ಇದಕ್ಕೆ? ಸರ್ಕಾರದ ಮುಂದೆ ನಾಳೆ ಬರುತ್ತಾರೆ. ಅಲ್ಲಿ ಯಾವನೋ ತೆಗೆದುಕೊಂಡು ತಿಂದ. ವಿಧಾನ ಸೌಧದ ಮುಂದೆ ಟೆಂಟ್ ಹಾಕುತ್ತಾರೆ. ಧಿಕ್ಕಾರ ಅವರಿಗೆ, ಇವರಿಗೆ ಧಿಕ್ಕಾರ ಎಂದು. ಇದೆಲ್ಲಾ ನಾಳೆ ಬರುವಂಥಕ್ಕೆ ನಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆಯೇ ಹೊರತು ಯಾರ ಅಧಿಕಾರವನ್ನೂ ಇಲ್ಲಿ ಕಿತ್ತುಕೊಂಡಿಲ್ಲ. ಯಾರೋ ಒಬ್ಬರು ಇದೊಂದು ಕರಾಳ ಶಾಸನ ಎಂದು ಪ್ರಿಂಟ್ ಹಾಕಿಕೊಂಡು ಬಂದಿದ್ದಾರೆ. ಅವರ ಕತೆ ಬೇಕೆಂದರೆ ಆಮೇಲಿಂದ ಹೇಳುತ್ತೇನೆ. ಏನಾಗಿದೆ ಎಂದು ಹೇಳಿ. ಅದನ್ನು ಓದಿ ವಾದ ಮಾಡುವುದು ಬೇಡ. ಏನು ಅಗತ್ಯವಾಗಿ ಆಗಿದೆ, ಅದನ್ನು ತಾವು ಪ್ರಸ್ತಾಪ ಮಾಡಿ. ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಇಲ್ಲಿ ಈಗಾಗಲೇ ಸುಮಾರು ಎಂಟು ನೂರು ಕೋಟಿ ರೂಪಾಯಿಗಳ ಡಿಪಾಸಿಟ್ ಸಂಗ್ರಹವಾಗಿದೆ. ಅದನ್ನು ಕಾಯಬೇಕಾಗಿದೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಇದೆ. ಆದ್ದರಿಂದ ಇದನ್ನು ದಯಮಾಡಿ ತಾವು ಈಗಲೇ ಹತ್ತು ನಿಮಿಷ ಇರಬಹುದು, ಇಪ್ಪತ್ತು ನಿಮಿಷ ಇರಬಹುದು, ಪ್ರಸ್ತಾಪ ಮಾಡಿ ಚರ್ಚೆ ಮಾಡಿ ಒಪ್ಪಿಗೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಎಂದರೆ ಯಾರದೇ ಹಣ ಈ ರೀತಿ ಸೌಹಾರ್ದದಲ್ಲಿರಲಿ, ಪ್ರಾಥಮಿಕ ಸಹಕಾರ ಸಂಘದಲ್ಲಿರಲಿ, ಡಿಸಿಸಿ ಬ್ಯಾಂಕ್‌ಗಳಲ್ಲಿರಲಿ, ಇನ್ನಾವುದೇ ಹಣಕಾಸು ಸಂಸ್ಥೆಗಳಲ್ಲಿರಲಿ, ಅದಕ್ಕೆಲ್ಲಾ ಸೂಕ್ತವಾದ ರಕ್ಷಣೆಯನ್ನು ಕೊಡುವಂಥ ದೃಷ್ಟಿಯಿಂದ ಸರ್ಕಾರ ಜವಾಬ್ದಾರಿಯನ್ನು ವಹಿಸಲೇಬೇಕು. ಜವಾಬ್ದಾರಿಯನ್ನು ಸ್ವೀಕರಿಸಲೇಬೇಕು. ಆ ರೀತಿ ಸಾರ್ವಜನಿಕರಿಗ್ಯಾರಿಗಾದರೂ ಅವರು ಮೋಸ ವಂಚನೆಯನ್ನು ಮಾಡಿದ್ದಿದ್ದರೆ ಸರ್ಕಾರ ಅದರ ಮೇಲೆ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಲೇಬೇಕು. ಅದರ ಮೇಲೆ ಪ್ರಶ್ನೆಯೇ ಇಲ್ಲ. ಆದರೆ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಸಾಧ್ಯವಾಗುವುದಿಲ್ಲ ಎನ್ನುವಂಥದ್ದನ್ನು ಇವತ್ತು ಅನೇಕ ಹಣಕಾಸು ಸಂಸ್ಥೆಗಳು ಜನಗಳಿಗೆ ಟೋಪಿ ಹಾಕಿ ಹೋಗಿರುವುದನ್ನು ನಾವು ನೋಡುತ್ತಿದ್ದೇವೆ. ಕ್ರಮ ತೆಗೆದುಕೊಳ್ಳಿ ಕ್ರಮ ತೆಗೆದುಕೊಳ್ಳಲೇಬೇಕು. ಬಿಗಿಯಾದ ಹಿಡಿತ ಆಗಲೇಬೇಕು. ಆದರೆ ನಾನು ಮೂಲಭೂತವಾಗಿ ಎರಡು-ಮೂರು ಅಂಶವೆಂದರೆ ಇಲ್ಲಿ ನೀವು ಮಂಡಿಸಿರುವ ವಿಧೇಯಕದ ಅಂಶದಲ್ಲಿ ಈಗ ನೀವು ಯಾವುದೇ ಹೊಸ ಸೌಹಾರ್ದ ಕಾಯ್ದೆ ತಿದ್ದುಪಡಿಯಾಗಬೇಕೆಂದರೆ ರಿಜಿಸ್ಟ್ರೇಷನ್‌ಗೆ ನೀವು ಈ ಷರತ್ತನ್ನು ವಿಧಿಸುವಂಥ ಅವಕಾಶವನ್ನು ರಿಜಿಸ್ಟ್ರಾರ್‌ರವರಿಗೆ ಕೊಡುತ್ತಿದ್ದೀರಿ. ನಮಗೆ ಏನು ಅನಿಸುತ್ತದೆ ಎಂದರೆ ನೀವು ನಮಗೆ ಪ್ರಿಂಟ್ ಮಾಡಿ ಕೊಟ್ಟಿರುವ ಕರಾಳ ತಿದ್ದುಪಡಿ ಬಗ್ಗೆ ಸೌಹಾರ್ದ ಕ್ಷೇತ್ರದಲ್ಲಿರುವಂಥವರು ಇದನ್ನು refer ಮಾಡಿಯೇ ಮಾಡುತ್ತೇವೆ. ನಮಗೆ ಒಳ್ಳೆಯ ಸಂಗತಿಗಳು

ಯಾವ ಪುಸ್ತಕದಿಂದ ಬಂದರೂ ನಾವು ಅದನ್ನು ಸ್ವೀಕಾರ ಮಾಡುತ್ತೇವೆ ಅದು ಬೇರೆ.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಮಂತ್ರಿಗಳು): ನೀವು ಇಟ್ಟುಕೊಂಡಿರುವ booklet ನಲ್ಲಿ ಒಳ್ಳೆಯದು ಇದ್ದರೆ ಹೇಳಿ. ಮಾನ್ಯ ಕಾಗೇರಿಯವರೇ, ನೀವು ಅಮೆಂಡ್‌ಮೆಂಟ್ ಏನಾದರೂ ಸೂಚನೆ ಇದ್ದರೆ ಅದನ್ನು ಕಳುಹಿಸಿ. ತೊಂದರೆ ಇಲ್ಲ. ಆದರೆ ನೀವು ಅದನ್ನು ಇಟ್ಟುಕೊಂಡು ಮಾತ್ರ ವಾದ ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನ್ನ ಹತ್ತಿರ ಎಲ್ಲವೂ ಇದೆ. ಬೇರೆ ಎಲ್ಲಾ ದಾಖಲೆಗಳೂ ಇರೆ. ಅಮೂ ನನ್ನ ಹತ್ತಿರ ಇದೆ.

ಅಧ್ಯಕ್ಷರು: ಮಾನ್ಯ ಹೆಗಡೆಯವರೇ, ಮಾನ್ಯ ಎಸ್‌ಎಸ್ ಪಾಟೀಲರು ಬೇರೆ ಇಲ್ಲ. We will meet after one hour.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ನಿನ್ನೆ ಏನಾಯಿತು ಇವತ್ತು ಬೆಳಿಗ್ಗೆ ಒಂದು ಗಂಟೆಯವರೆಗೂ ಸಭೆಯನ್ನು ನಡೆಸಬೇಕೆಂದಾಯಿತು. ಅದ್ಯಾಕೋ ಏನೋ ನಾವು ಬಹಳಷ್ಟು ಹೊತ್ತು ನಡೆಸಿ ಎಂದಾಗ ನಡೆಸುವುದಿಲ್ಲ. ಅದ್ಯಾಕೋ ಇವತ್ತು ಮುಂದುವರಿಯುತ್ತಿದೆ. ಇರಲಿ. ಏಕೆಂದರೆ ಏನಾಗಿದೆ ಎಂದರೆ ನಮಗೂ ಒಂದು restriction ಇರುತ್ತದೆ. ಕೆಲವೊಂದು ಕಡೆ ನಾವು ಪ್ರೋಗ್ರಾಮ್ಸ್‌ಗಳನ್ನು ಫಿಕ್ಸ್ ಮಾಡಿದ್ದೇವೆ. ಒಂದು ಗಂಟೆಯವರೆಗೆ ಎಂದು ನಾವು ತಿಳಿದುಕೊಂಡು ಮೂರು ಗಂಟೆಗೆ ನಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಬೇರೆ ಬೇರೆ ಪಕ್ಷದ ಮೀಟಿಂಗ್ಸ್ ಇರಬಹುದು, ಇನ್ನು ಬೇರೆ ಇರಬಹುದು. ಹೀಗಾಗಿ ನಮಗೆ ಬರಲಿಕ್ಕೆ ಅನಾನುಕೂಲ ಇದೆ. ನಿನ್ನೆ ಎಷ್ಟೋ ಜನ ಶಾಸಕರುಗಳು ನಿನ್ನೆ ರಾತ್ರಿಯೇ ಊರಿಗೆ ಹೊರಟುಹೋಗಿದ್ದಾರೆ. ಇವತ್ತು extend ಆಗುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ. ಇವತ್ತು atleast extend ಆಗುವ ಬಗ್ಗೆ ಬಿಎಸಿ ಮೀಟಿಂಗ್‌ನಾದರೂ ಕರೆದು ಕನ್‌ಸಲ್ಟೇಷನ್ ಕೂಡ ಏನೂ ಆಗಲಿಲ್ಲ. ಇವತ್ತಿಗೆ ಅಡ್ಜರ್ನ್ ಆಯಿತು. ನಾವು ಉಳಿದುಕೊಂಡೆವು. Actually ಬೇರೆ ಕಡೆಗೆ ಹೋಗುವುದಿತ್ತು. ನಾವು ಉಳಿದುಕೊಂಡೆವು. ಆದರೂ ಇವತ್ತು ಇನ್ನೂ ಎರಡೂವರೆ ಗಂಟೆಯವರೆಗೆ ನಡೆಸಿ ಇದನ್ನು ಮುಗಿಸಬಹುದು ಏಕೆಂದರೆ ಇನ್ನೂ ಕೆಲವರು ಮಧ್ಯಾಹ್ನ ಕೂಡ ಊರಿಗೆ ಹೋಗುವವರೂ ಇದ್ದಾರೆ. ಮತ್ತು ನಮಗೆ ಪ್ರೋಗ್ರಾಮ್ಸ್ ಕೂಡ ಫಿಕ್ಸ್ ಆಗಿದ್ದಾವೆ. ಈಗ ನಮಗೆ ಮಧ್ಯಾಹ್ನ ಮತ್ತೆ ಬರಲಿಕ್ಕೆ ಅನಾನುಕೂಲತೆ ಇದೆ. ಅದರ ಮೇಲೆ ತಾವೇನು ತೀರ್ಮಾನವನ್ನು ಕೈಗೊತ್ತೀರೋ ಅದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು: ಈಗ ಬೀಳ್ಕೊಡುಗೆ ಪ್ರಸ್ತಾಪ ಬೇರೆ ಇದೆ. ಅದು ಮಿನಿಮಮ್ ಅರ್ಧ ಗಂಟೆ ಮುಕ್ಕಾಲು ಗಂಟೆ ಹಿಡಿಯುತ್ತದೆ. ತಾವು ಒಂದು ಕೆಲಸವನ್ನು ಮಾಡಿ, ತಮಗೆ ಅರ್ಜೆಂಟ್ ಇದ್ದರೆ ಹೋಗಿ. ನಿಮ್ಮ ಪರವಾಗಿ ಬೇರೆ ಯಾರಾದರೂ ಇದ್ದರೂ ಸಾಕು.

ಶ್ರೀ ಜಗದೀಶ್ ಶೆಟ್ಟರ್: ಬೆಳಿಗ್ಗೆಯಿಂದಲೂ ಮಾಡಿಕೊಂಡು ಬಂದಿದ್ದೇವೆ. ಇನ್ನು ಒಂದು ಗಂಟೆಯೊಳಗೆ ಇದನ್ನು ಮುಗಿಸಬಹುದಾಗಿತ್ತು.

ಅಧ್ಯಕ್ಷರು: ಮಾಡುತ್ತಲೇ ಇದ್ದೇವಲ್ಲಾ ಬಿಲ್‌ಗಳನ್ನೆಲ್ಲಾ ಪಾಸ್ ಮಾಡುತ್ತಲೇ ಇದ್ದೇವಲ್ಲಾ ನಿಮ್ಮನ್ನೆ ಕುಳಿತಿಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಇದನ್ನು ಎರಡೂವರೆ ಗಂಟೆಯೊಳಗೆ ಮುಗಿಸಬಹುದಾಗಿತ್ತು.

ಅಲ್ಲಿ ಕೌನ್ಸಿಲ್‌ನಿಂದ ಯಾವುದೋ ಒಂದು ಬಿಲ್ ಪಾಸಾಗಿ ಬರಬೇಕು. ಅದರ ಸಲುವಾಗಿ ನಾವು ವೇಟ್ ಮಾಡುವುದು, ಇದು ನಮಗೆ ಮಾನಸಿಕ ಹಿಂಸೆ ತರುತ್ತದೆ. ಆ ಕೌನ್ಸಿಲ್‌ನಲ್ಲಿ ಯಾವುದೋ ಒಂದಿಷ್ಟು ಬಿಲ್‌ಗಳು ಪಾಸಾಗಿ ಇಲ್ಲಿಗೆ ಬರಬೇಕು. ಅದರ ಸಲುವಾಗಿ ನಾವು ವೇಟ್ ಮಾಡಬೇಕು. ಈ ವಿಧಾನಸಭೆ ಅಧಿವೇಶನದಲ್ಲಿ ಇದು ನಮಗೆ ಬೇಜಾರಾಗುತ್ತಿದೆ.

ಅಧ್ಯಕ್ಷರು: ಇಲ್ಲ, ಇಲ್ಲ, ದಯವಿಟ್ಟು ಕ್ಷಮಿಸಬೇಕು. ನಿನ್ನೆಯೇ ಮುಗಿಸಬೇಕೆಂದು ಇದ್ದೆವು. ವಿರೋಧ ಪಕ್ಷದವರೆಲ್ಲರೂ ಇವತ್ತು ಬೆಳಿಗ್ಗೆ ತೆಗೆದುಕೊಳ್ಳೋಣ ಎಂದು ನೀವುಗಳೆಲ್ಲಾ ಹೇಳಿದಮೇಲೆ ನಿಮ್ಮ request ಮೇಲೆ ನಾವು ಒಪ್ಪಿಕೊಂಡಿದ್ದೇವೆ. ಸರ್ಕಾರದವರೂ ಒಪ್ಪಿದ್ದಾರೆ. ಅವರು ಹೇಳಿತ್ತಿರುವುದು one or two hour adjust ಮಾಡಿಕೊಳ್ಳಬೇಕಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಮತ್ತೊಂದು ಏನು ಇದೆ, ಕೆಲವೊಂದು ಬಿಲ್‌ಗಳು ಅಲ್ಲಿ ಪಾಸಾಗಿ ಅವುಗಳು ಇಲ್ಲಿಗೆ ಬರುತ್ತಿದ್ದಾವೆ. ಇಲ್ಲಿ ಬರುವವರೆಗೂ ಅದರ ಸಲುವಾಗಿ ನಾವು ವೇಟ್ ಮಾಡಬೇಕಾಗಿದೆ. ಆ ಪರಿಸ್ಥಿತಿ ಇದೆ.

ಅಧ್ಯಕ್ಷರು: ಅದೂ ಇದೆ. ಆಮೇಲೆ ಬೀಳ್ಕೊಡುಗೆ ಪ್ರಸ್ತಾಪ ಬೇರೆ ಇದೆ. ಇನ್ನು two hours ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ನನ್ನ ಪ್ರಕಾರ ಇರುವುದು ಇದೊಂದೇ. ಆದರೆ ಕೌನ್ಸಿಲ್‌ನಲ್ಲಿ ಅವು ಚರ್ಚೆಯಾಗಿ ಅವುಗಳು ಇಲ್ಲಿಗೆ ಬರಬೇಕು. ಇನ್ನು ಬಜೆಟ್ ಅಲ್ಲಿ ಪಾಸಾಗಿ ಬರಬೇಕು ವೇಟ್ ಮಾಡಿ ಎಂದರೆ ವೇಟ್ ಮಾಡುವುದಕ್ಕೆ ಅಡ್ಡಿ ಇಲ್ಲ. ಇನ್ನು ಇವತ್ತು ಯಾವುದು ಅಜೆಂಡಾದಲ್ಲಿಲ್ಲ, ಮತ್ತೆ ಹೊಸ ಬಿಲ್‌ಗಳು add ಆಗುತ್ತವೆ. ಅದರ ಸಲುವಾಗಿ ನಾವು ಚರ್ಚೆ ಮಾಡುವುದಕ್ಕೆ ನಾವು ಚರ್ಚೆ ಮಾಡುವುದಕ್ಕೆ ನಾವು ಕುಳಿತಿರಬೇಕು. Actually ಇವತ್ತು ಯಾವ ಯಾವ ಬಿಲ್ಸ್‌ಗಳು ಬಂದಿವೆ, ನಿಜವಾಗಿ ನಿನ್ನೆಯೇ ಅವುಗಳನ್ನು ಮನೆಗೆ ಕಳುಹಿಸಬೇಕಾಗಿತ್ತು. ಆ ಅಜೆಂಡಾ ಜೊತೆ. ಯಾವುದೂ ಬಂದಿಲ್ಲ. ಇವತ್ತು ಬೆಳಿಗ್ಗೆ ಬಂದು ನಾವು ಸುಮ್ಮನೆ co-operation ನ್ನು ಕೊಡಬೇಕು. ಕೊಡುತ್ತಿದ್ದೇವೆ. ಅದಕ್ಕೂ ಒಂದು ಲಿಮಿಟ್ ಇರುತ್ತದೆ. ಸರ್ಕಾರಕ್ಕೆ ಕೋ–ಆಪರೇಷನ್ ಕೊಡುವುದಕ್ಕೂ ಒಂದು ಲಿಮಿಟ್ ಇರುತ್ತದೆ. ಇವತ್ತು ಯಾವುದೋ ಹೊಸ ಬಿಲ್‌ಗಳು ಬರುತ್ತವೆ. ಇವತ್ತೇ ಚರ್ಚೆ ಮಾಡಿ ಎಂದರೆ ಹೇಗೆ? ಇವತ್ತು ಮಧ್ಯಾಹ್ನ ಹೊಸ ಬಿಲ್‌ಗಳು ಬರುತ್ತವೆ, ಅದನ್ನು ಯಾವ ರೀತಿ ಪಾಸ್ ಮಾಡಬೇಕು ಎಂದು ನನಗೆ ಅರ್ಥವೇ ಆಗುತ್ತಿಲ್ಲ. ಈಗ ಅಲ್ಲಿ ಕೌನ್ಸಿಲ್‌ನಿಂದ ಬಿಲ್‌ಗಳು ಬರುತ್ತವೆ. ಅದನ್ನು ಈಗ ತಕ್ಷಣಕ್ಕೇ ಚರ್ಚೆ ಮಾಡಿ ಪಾಸ್ ಮಾಡಿಕೊಡಿ ಎಂದರೆ ಹೇಗೆ ಪಾಸ್ ಮಾಡಿಕೊಡುವುದಕ್ಕೆ ಸಾಧ್ಯ?

ಅಧ್ಯಕ್ಷರು: ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಜರೂರಾದ ಬಿಲ್‌ಗಳು ಬರುತ್ತವೆ.

ಶ್ರೀ ಜಗದೀಶ್ ಶೆಟ್ಟರ್: ಹಾಗಾದರೆ ನಾವು ಅವುಗಳನ್ನು ಅಭ್ಯಾಸ ಮಾಡುವುದು ಬೇಡವೇ?

ಅಧ್ಯಕ್ಷರು: ಮಾಡಿ ತಾವು experts ಇದ್ದೀರಿ, ಮಾಡಿ. ಸರ್ಕಾರದವರು ಮಾಡುವುದೆಲ್ಲಾ public interest ನಿಂದಲೇ ಮಾಡುವುದು.

ಶ್ರೀ ಜಗದೀಶ್ ಶೆಟ್ಟರ್: ನಾಳೆ ಸಾರ್ವಜನಿಕರು ಮಾತನಾಡುತ್ತಾರೆ. ಅದೇನೂ ಚರ್ಚೆಯಾಗುತ್ತಿಲ್ಲ. ಶಾಸನವನ್ನು ಪಾಸು ಮಾಡುವುದು ನಮ್ಮ ಜವಾಬ್ದಾರಿ. ಯಾವುದೇ ಬಿಲ್ ಚರ್ಚೆಯಾಗದೇ ಅಲ್ಲಿ ಪಾಸಾಗುತ್ತಿವೆ, ಶಾಸಕರುಗಳು ಸರಿಯಾಗಿ ಅಲ್ಲಿ ಅಭ್ಯಾಸ ಮಾಡುವುದಿಲ್ಲ.

ಚರ್ಚೆ ಮಾಡುವುದಿಲ್ಲವೆಂದು ಬರುತ್ತದೆ. ಅಲ್ಲಿ ಅಭ್ಯಾಸ ಮಾಡಬೇಕಾದರೆ ಒಂದು ದಿವಸ ಮುಂಚಿತವಾಗಿ ಈ ಬಿಲ್‌ಗಳ ಕಾಪಿಗಳನ್ನು ಕಳುಹಿಸಿಕೊಡಬೇಕು. ಇವುಗಳು ನಿನ್ನೆ ಬಂದಿಲ್ಲ. Actually ನಿನ್ನೆ ಬಂದಿರುವುದು ಒಂದು-ಎರಡು ಬಿಲ್‌ಗಳು ಮಾತ್ರ ಬಂದಿತ್ತು. ಉಳಿದ ಬಿಲ್‌ಗಳನ್ನು ನಾವು ಪಾಸು ಮಾಡಿಕೊಟ್ಟಿದ್ದೇವೆ. ಇಷ್ಟೆಲ್ಲಾ ಸಹಕಾರವನ್ನು ಕೊಟ್ಟಾಗ್ಯೂ ಸಹ ನಮ್ಮ ಈ ಕಡೆ ಇದ್ದವರನ್ನು ನಮ್ಮ ತಾಳ್ಮೆಯನ್ನು ಸರ್ಕಾರ ಪರೀಕ್ಷೆ ಮಾಡುವುದು ಸರಿಯಲ್ಲ. ಇದರ ಮೇಲೆ ತಾವೇನು ಪೀಪಾನವನ್ನು ತೆಗೆದುಕೊಳ್ಳುತ್ತೀರೋ ಅದು ತಮಗೆ ಬಿಟ್ಟಿದ್ದು. ಆದರೆ ನಮಗಂತೂ ಇದು ಸರಿಯಾಗುತ್ತಿಲ್ಲ. ಸರ್ಕಾರದ ಈ ನಡವಳಿಕೆ ಏನಿದೆ, ಇದು ಸರಿಯಾಗುತ್ತಿಲ್ಲ.

ಅಧ್ಯಕ್ಷರು: ಕೆಲವು ಸಲ ಪಬ್ಲಿಕ್ ಇಂಟರೆಸ್ಟ್ ಜರೂರಾಗಿ ತರಬೇಕಾಗಿ ಬರುತ್ತದೆ. Only in public interest they are bringing the bill.

ಶ್ರೀ ಜಗದೀಶ್ ಶೆಟ್ಟರ್: ಹಾಗಿದ್ದರೆ ಅಷ್ಟು ಜರೂರು ಇದ್ದರೆ ಒಂದು ಸ್ಪೆಷಲ್ ಸೆಷನನ್ನು ಕರೆಯಲಿ. ವಿಶೇಷ ಅಧಿವೇಶನವನ್ನು ಕರೆಯಲಿ. ಜರೂರು ಇದ್ದಾವೆ ಎಂದು ಹೇಳಿ. ಒಂದು ದಿವಸ ಕರೆಯುತ್ತಿದ್ದೇವೆ ಎಂದು ಹೇಳಲಿ.

ಅಧ್ಯಕ್ಷರು: ಸ್ವಂತ ಆಸ್ತಿಗೋಸ್ಕರ ತರುತ್ತಾರಾ?

ಶ್ರೀ ಜಗದೀಶ್ ಶೆಟ್ಟರ್: ಅಷ್ಟು ಜರೂರು ಇದ್ದರೆ ಒಂದು ವಿಶೇಷ ಅಧಿವೇಶನವನ್ನು ಕರೆಯಲಿ.

ಅಧ್ಯಕ್ಷರು: ಅಬ್ಬಾ ಸ್ವಾಮಿ, ಅವರು elections ಅನ್ನು ಅನೌನ್ಸ್ ಮಾಡುತ್ತಿದ್ದಾರಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಎಲ್ಲಿ? ಸನ್ಮಾನ್ಯ ಅಧ್ಯಕ್ಷರೇ, ಇನ್ನೂವರೆಗೆ ಗೊಂದಲ ನಿವಾರಣೆಯಾಗಿಲ್ಲ. ಇವತ್ತು ಕೊನೆಯ ದಿವಸ ಎಂಬು ಹೇಗೆ ಅರ್ಥವಾಗುತ್ತದೆ? ಯಾರಿಗೆ ಬೀಳ್ಕೊಡುಗೆ? ಇವತ್ತು ಕೊನೆಯ ದಿವಸ ಎಂದು ನಾವು ಯಾವ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು? ಇನ್ನೂ ಈ ಸರ್ಕಾರ ಮುಂದುವರೆದರೆ ಸಪ್ಟೆಂಬರ್‌ವರೆಗೆ ಅವಧಿ ಇದೆ. ಸರ್ಕಾರ ಇನ್ನೂ cabinet decision ನ್ನೇ ತೆಗೆದುಕೊಂಡಿಲ್ಲ ವಿಸರ್ಜನೆ ಮಾಡಬೇಕೆಂದು ಹೇಳಿ. ಇವತ್ತು ಕೊನೆಯ ದಿವಸ ಎಂದು ನಮಗೆ ಅನ್ನಲಿಕ್ಕೇ ಬರುವುದಿಲ್ಲ. ಮತ್ತೊಂದು ಇನ್ನೊಂದು ವಾರ ಬಿಟ್ಟು ಅಧಿವೇಶನವನ್ನು ಕರೆಯಲಿ ಅಪರು. ಏಕೆಂದರೆ ಅವರು ಆಫೀಸ್‌ನಿಂದ ವಿಸರ್ಜನೆ ಮಾಡಿದ್ದೇವೆಂದು ಅಧಿಕೃತವಾಗಿ ಹೇಳದೇ ಇದ್ದಾಗ ನಾವು ಇದನ್ನು ಕೊನೆಯ ದಿವಸ ಎಂದು ಅನ್ನಲಿಕ್ಕೇ ಬರುವುದಿಲ್ಲ ನನ್ನ ಅಭಿಪ್ರಾಯದ ಪ್ರಕಾರ.

ಅಧ್ಯಕ್ಷರು: ಆಯಿತು ಸ್ವಾಮಿ, ಕೊನೆಯ ದಿವಸ ಒಂದು ಗಂಟೆ ಎರಡು ಗಂಟೆಯೋ ದಯವಿಟ್ಟು ಅಡ್ಜಸ್ಟ್ ಮಾಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಕೊನೆಯ ದಿವಸ ಎಂದು ನೀವು ಹೇಗೆ ಹೇಳುತ್ತೀರಿ?

ಅಧ್ಯಕ್ಷರು: ಸೆಷನ್‌ಗೆ ಕೊನೆಯ ದಿವಸ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮಗೆ ಗೊತ್ತಿಲ್ಲ. ಮೂರು ಗಂಟೆ ಆಗುತ್ತಲೋ ಆಮೇಲೆ ಏನಾಗುತ್ತದೋ ಎಂದು ನಮಗೆ ಗೊತ್ತಿಲ್ಲ.

ಅಧ್ಯಕ್ಷರು: ಏನೂ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಾವಂತೂ ಮಧ್ಯಾಹ್ನ ಇರಲಿಕ್ಕೆ ಆಗುವುದಿಲ್ಲ. ಮಧ್ಯಾಹ್ನ ಮೂರು ಗಂಟೆಗೆ ಕಾರ್ಯಕ್ರಮಗಳನ್ನು ಫಿಕ್ಸ್ ಮಾಡಿಕೊಂಡಿದ್ದೇವೆ. ಬೇಕಾದರೆ ಅಧಿವೇಶನವನ್ನು ಇನ್ನೂ ಒಂದು ವಾರ ನಡೆಸಿ. ನಮ್ಮದೇನೂ ತಕರಾರಿಲ್ಲ. ಆದರೆ ಮಧ್ಯಾಹ್ನ ನಾವು ಹಲವಾರು ಕಾರ್ಯಕ್ರಮಗಳನ್ನು ನಿಗದಿ ಮಾಡಿದ್ದೇವೆ. ನಾವಂತೂ ಇರಲಿಕ್ಕಾಗುವುದಿಲ್ಲ. ದಯವಿಟ್ಟು ತಾವು ಸಹಕಾರವನ್ನು ಕೊಡಬೇಕು.

ಅಧ್ಯಕ್ಷರು: ತಮ್ಮ ಪರವಾಗಿ ಮಾನ್ಯ ಸುರೇಶ್ ಕುಮಾರ್ ಅವರೆಲ್ಲಾ ಇರುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ ಪಾರ್ಟಿ ಕಡೆಯಿಂದಲೇ ಯಾರೂ ಕೂಡ ಇರುವುದಕ್ಕಾಗುವುದಿಲ್ಲ. ಆ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು: ಇಲ್ಲಿ ಕೇಳಿ. ಕೆಲವು ನಾವು ಎರಡು ಗಂಟೆಗೆ ಮುಗಿಸಬೇಕೆಂದರೂ ಸಂಜೆವರೆಗೂ ಕುಳಿತಿರುತ್ತೇವಲ್ಲಾ ಬೇಕಾದಷ್ಟು ಸಲ ಕುಳಿತಿದ್ದೇವಲ್ಲಾ. ಆ ರೀತಿ ನೀವು ಅಡ್ಜಸ್ಟ್ ಮಾಡಿಕೊಳ್ಳದಿದ್ದರೆ ಹೇಗೆ? ಅದೂ ಕೊನೆಯ ದಿವಸ. ತಾವು ದಯವಿಟ್ಟು ಅಡ್ಜಸ್ಟ್ ಮಾಡಿಕೊಳ್ಳಿ. ಈಗ ಸದನವನ್ನು ಮೂರು ಗಂಟೆಗೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4.00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:-

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಕಾರ್ಯದರ್ಶಿಯವರು ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುವುದು.

ಶ್ರೀ ಟಿ. ರಾಜಣ್ಣ:- (ಕಾರ್ಯದರ್ಶಿಯವರು ವಿಧಾನಸಭೆ) :- ಮಾನ್ಯ ಅಧ್ಯಕ್ಷರೆ,

i) ರಾಜ್ಯಪಾಲರಿಂದ ಉಲ್ಲೇಖಿಸಲಾಗಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004. ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

iii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 2004.

4. ಪ್ರಕಟಣೆ

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಈಗ ಪ್ರಕಟಣೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.